RNU AIR DHARWAD

JUNE 17, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**1. ಪ್ರತಿ ವರ್ಷ ಜೂನ್ 10 ರಂದು, ವಿಶ್ವ ನೇತ್ರ ದಾನ ದಿನ ಆಚರಿಸಲಾಗುತ್ತದೆ. ತನ್ನಿಮಿತ್ತ, ದೃಷ್ಟಿದಾನ ಜಾಗೃತಿ ಸಪ್ತಾಹ, ರಾಜ್ಯದ ವಿವಿಧೆಡೆ, ಕಣ್ಣಿನ ಆಸ್ಪತ್ರೆ, ಐ ಬ್ಯಾಂಕ್‌ಗಳಲ್ಲಿ ನೇತ್ರ ತಜ್ಞರ ಮಾರ್ಗದರ್ಶನದಲ್ಲಿ, ನೇತ್ರದಾನ ಪ್ರತಿಜ್ಞೆ ಕೈಗೊಳ್ಳುವ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿದವು.**

**ದೃಷ್ಟಿ ದಾನದ ಮಹತ್ವ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ, ಕೆ.ಎಂ.ಸಿ. ಆರ್.ಐ. ನೇತ್ರ ಚಿಕಿತ್ಸಾ ವಿಭಾಗದ, ತಜ್ಞ ವೈದ್ಯ ಡಾಕ್ಟರ್ ರಾಜಶೇಖರ ದ್ಯಾಬೇರಿ.**

<><><>

**ಡಾ. ರಾಜಶೇಖರ ದ್ಯಾಬೇರಿ ಧ್ವನಿ 30 ಸೆಕೆಂದುಗಳು**

<><><>

**2. ಶಾಲೆಗಳಲ್ಲಿ ಕಡ್ಡಾಯವಾಗಿ, 25 ವಿದ್ಯಾರ್ಥಿಗಳನ್ನು ಒಳಗೊಂಡಂತೆ, ಹವಾಮಾನ ಕ್ರಿಯಾ ಬಳಗ ಮತ್ತು ಪರಿಸರ ಸಂಘಗಳನ್ನು ರಚಿಸಲು, ಆದೇಶ ನೀಡಿದ್ದು, ಒಂದೊಂದು ಶಾಲೆ ಒಂದೊಂದು ಪ್ರದೇಶವನ್ನು ಆಯ್ಕೆ ಮಾಡಿಕೊಂಡು, ಒಬ್ಬೊಬ್ಬ ವಿದ್ಯಾರ್ಥಿಯೂ, ಒಂದೊಂದು ಗಿಡ ನೆಟ್ಟು ಪೋಷಿಸಬೇಕು ಎಂದು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದ್ದಾರೆ. ವಿಧಾನಸೌಧದ ಪೂರ್ವದ್ವಾರದಲ್ಲಿ, ಪರಿಸರ ದಿನದ ಅಂಗವಾಗಿ, ಪರಿಸರ ನಡಿಗೆಗೆ ಚಾಲನೆ ನೀಡಿ ಮಾತನಾಡಿದರು.**

<><><>

**ಪರಿಸರ ನಡಿಗೆ ಕಾರ್ಯಕ್ರಮದಲ್ಲಿ, ಸ್ಕೌಟ್ಸ್, ಗೈಡ್ಸ್ ಹಾಗೂ ಎನ್‌ಸಿಸಿ ಸೇರಿದಂತೆ, ಪರಿಸರಾಸಕ್ತ ಮೂರು ಸಾವಿರಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದರು.**

<><><>

**ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿಗಳನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂದು ಹಲವು ಸಾಧಕರಿಗೆ ಪ್ರದಾನಿಸಿ, ಗೌರವಿಸಲಿದ್ದಾರೆ ಎಂದು, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ, ಪಿ.ಎಂ. ನರೇಂದ್ರಸ್ವಾಮಿ ತಿಳಿಸಿದ್ದಾರೆ.**

<><><>

**3.** ರಾಜ್ಯದ ಪ್ರತಿ ಗ್ರಾಮದಲ್ಲಿ, ಪ್ರಾಯೋಗಿಕವಾಗಿ ಕೃಷಿ ಜಮೀನನ್ನು, ಭಾಗಶಃ ರಾಸಾಯನಿಕ ಮುಕ್ತವಾಗಿ, ಪರಿವರ್ತಿಸಲು, ಕ್ರಮ ಕೈಗೊಳ್ಳುವುದಾಗಿ, ಕೃಷಿ ಖಾತೆ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ. ಬೆಂಗಳೂರಿನ ವಿಕಾಸಸೌಧದಲ್ಲಿ, ನೆಲಮೂಲದ ಕೃಷಿ ತಜ್ಞರೊಂದಿಗೆ ಸಭೆ ನಡೆಸಿದ ಸಚಿವರು, ಸುಭಾಷ ಪಾಳೇಕರ ಕೃಷಿಯ, ಸಾಧಕ–ಬಾಧಕಗಳ ಕುರಿತು ಹಾಗೂ ರಾಜ್ಯದ ನಾಲ್ಕೂ ಕೃಷಿ ವಿಶ್ವವಿದ್ಯಾಲಯಗಳಲ್ಲಿ, ಸಾವಯವ ಕೃಷಿ ಪ್ರೋತ್ಸಾಹಿಸುವ ಬಗ್ಗೆ, ಯೋಜನೆ ರೂಪಿಸುವುದಾಗಿ ತಿಳಿಸಿದರು. ಹೆಸರಾಂತ ಕೃಷಿ ತಜ್ಞ ಸುಭಾಷ ಪಾಳೇಕರ ಪಾಲ್ಗೊಂಡಿದ್ದರು.

<><><>

**4.** ಎಲ್ಲ ಮತಗಟ್ಟೆಗಳಲ್ಲೂ, ವೆಬ್ ಕಾಸ್ಟಿಂಗ್ ಸೌಲಭ್ಯ ಕಲ್ಪಿಸಲು, ಭಾರತ ಚುನಾವಣಾ ಆಯೋಗ ನಿರ್ಧರಿಸಿದೆ. ಮತದಾನ ದಿನ ಪಾರದರ್ಶಕತೆ ಮತ್ತು ಮೇಲ್ವಿಚಾರಣೆಯನ್ನು ಇನ್ನಷ್ಟು ಬಲಪಡಿಸಲು, ಆಯೋಗ ನಿರ್ಧರಿಸಿದೆ. ಈ ವರ್ಷದ ಕೊನೆಯಲ್ಲಿ, ಬಿಹಾರ ವಿಧಾನಸಭಾ ಕ್ಷೇತ್ರದ ಚುನಾವಣೆ ನಡೆಯಲಿದೆ. ಶೇಕಡ 100 ರಷ್ಟು, ವೆಬ್ ಕಾಸ್ಟಿಂಗ್ ಜಾರಿಗೆ ತರುವ, ಮೊದಲ ರಾಜ್ಯವಾಗಲಿದೆ ಎಂದು, ಆಯೋಗ ತಿಳಿಸಿದೆ.

<><><>

**5.** 'ತೀವ್ರ ಅತಿಸಾರ ಬಾಧೆಯಿಂದ, ಮಕ್ಕಳ ಮರಣ ಪ್ರಮಾಣವನ್ನು ಶೂನ್ಯಕ್ಕೆ ತರೋಣ' ಎಂಬ, ಧ್ಯೇಯದೊಂದಿಗೆ. 45 ದಿನಗಳ, 'ಅತಿಸಾರ ನಿಲ್ಲಿಸಿ ಅಭಿಯಾನ'ಕ್ಕೆ, ಆರೋಗ್ಯ ಇಲಾಖೆ ರಾಜ್ಯಾದ್ಯಂತ ಆರಂಭಿಸಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ವಿಜಯಪುರ ಜಿಲ್ಲೆ, ಸಂತಾನೋತ್ಪತ್ತಿ ಹಾಗೂ ಮಕ್ಕಳ ಆರೋಗ್ಯ ರಕ್ಷಣಾಧಿಕಾರಿ, ಡಾಕ್ಟರ್ ಪರಶುರಾಮ ಹಿಟ್ನಳ್ಳಿ.

<><><>

ಡಾಕ್ಟರ್ ಪರಶುರಾಮ ಹಿಟ್ನಳ್ಳಿ ಧ್ವನಿ 30 ಸೆಕೆಂದುಗಳು

<><><>

**6.** ದಕ್ಷಿಣಕನ್ನಡ, ಚಿಕ್ಕಮಗಳೂರು, ಉಡುಪಿ, ಕೊಡಗು, ಉತ್ತರಕನ್ನಡ, ಧಾರವಾಡ ಹಾಗೂ ಶಿವಮೊಗ್ಗ ಸೇರಿದಂತೆ, ರಾಜ್ಯದ ವಿವಿಧೆಡೆ, ಮಳೆ ಮುಂದುವರೆದಿದೆ. ಮೃಗಶಿರಾ ಮಳೆ ಬಿರುಸುಗೊಂಡ ಹಿನ್ನೆಲೆ, ಶಿವಮೊಗ್ಗ ಜಿಲ್ಲೆ, ಜೋಗ ಜಲಪಾತ ಮೈದುಂಬಿದೆ. ಹಾಲ್ನೊರೆಯೊಂದಿಗೆ ಧುಮ್ಮಿಕ್ಕುವ, ರಾಜ, ರಾಣಿ, ರೋರರ್ ಹಾಗೂ ರಾಕೆಟ್ ಜಲಧಾರೆ ವೀಕ್ಷಣೆಗೆ, ಪ್ರವಾಸಿಗರ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವಾಗಿದೆ.

<><><>

ರಾಜ್ಯದ ಕರಾವಳಿ ಹಾಗೂ  ಮಲೆನಾಡು ಜಿಲ್ಲೆಗಳಲ್ಲಿ, ಇಂದು ಜೋರಾದ ಗಾಳಿಯೊಂದಿಗೆ, ಚದುರಿದಂತೆ, ವ್ಯಾಪಕವಾಗಿ ಮಳೆಯಾಗುವ ಸಾಧ್ಯತೆಯಿದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ತಿಳಿಸಿದೆ.

<><><>

**7.** ಗದಗ ನ, ಲಿಂಗೈಕ್ಯ ಪಂಡಿತ ಶ್ರೀ ಪಂಚಾಕ್ಷರಿ ಗವಾಯಿಗಳ 81ನೇ ಹಾಗೂ ಲಿಂಗೈಕ್ಯ ಪಂಡಿತ ಶ್ರೀ ಪುಟ್ಟರಾಜ ಗವಾಯಿಗಳ ಮಹಾರಥೋತ್ಸವ ನಿಮಿತ್ತ, ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ, ಪೂಜ್ಯ ಪಂಚಾಕ್ಷರಿ ಗವಾಯಿಗಳ ಮಹಾ ಪುರಾಣ ಮಂಗಲೋತ್ಸವ ಸಂಜೆ 6 ಗಂಟೆಗೆ ಜರುಗಲಿದೆ.

<><><>

**8.** ಗಡಿ ನಾಡು, ಕಾಸರಗೋಡಿನ, ನಾಡೋಜ ಕಯ್ಯಾರ ರಾಷ್ಟ್ರೀಯ ಪ್ರಶಸ್ತಿಯನ್ನು, ಕಲಬುರಗಿ ಆಕಾಶವಾಣಿ ಕೇಂದ್ರದ, ನಿವೃತ್ತ ಕಾರ್ಯಕ್ರಮ ಮುಖ್ಯಸ್ಥ, ಸದಾನಂದ ಪೆರ್ಲ ಅವರಿಗೆ, ಹಿರಿಯ ಸಾಹಿತಿ ರಾಧಾಕೃಷ್ಣ ಉಳಿಯತ್ತಡ್ಕ, ಪ್ರದಾನಿಸಿ ಗೌರವಿಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**

<><><>